ಡನ್ನೋನ ಸಾಹಸ ಕಥೆಗಳು

17

ನಿಕೋಲಾಯ್ ನೋಸೊವ್

ಡನ್ನೋನ ಸ್ನೇಹಿತರ ಕೈಟ್ ಟೌನ್‌ಕ್ಕೆ ಭೇಟಿ



RADUGA PUBLISHERS



ಡನ್ನೋನ ಸಾಹಸ ಕಥೆಗಳು

ನಿಕೋಲಾಯ್ ನೋಸೊವ್

17

ಡನ್ನೋನ ಸ್ನೇಹಿತರ ಕೈಟ್ ಟೌನ್‌ಗೆ ಭೇಟಿ

ಚಿತ್ರಗಳು: ಬೋರಿಸ್ ಕಲೌಶಿನ್

ಕನ್ನಡಕ್ಕೆ ಪ್ರಭಾಕರ ನಾನಾವಟಿ



RADUGA PUBLISHERS
MOSCOW





ಬೇಗ, ಬೇಗ, ಹೊರಗೆ ಬನ್ನಿ,
ಇಬ್ಬರು ಮತ್ತು ನಾಲ್ವರು ಸಾಲಿನಲ್ಲಿ ನಿಲ್ಲಿ,
ಎಲ್ಲ ಗಾತ್ರದ ಮೈಟ್ಸ ಹುಡುಗರೆ ಮತ್ತು ಮೈಟ್ಸ ಹುಡುಗಿಯರೆ,
ವ್ಯಾಯಾಮದಿಂದ ದಿನವನ್ನು ಪ್ರಾರಂಭಿಸಿ!

ಕವಿ ಪೋಸಿ ಬರೆದಿದ್ದ ಈ ಹಾಡಿನೊಂದಿಗೆ ಡನ್ನೋನ ಸ್ನೇಹಿತರಾದ ಬೆಂಡಮ್ ಮತ್ತು ಟ್ವಿಸ್ಟಮ್ ತಮ್ಮ ದಿನವನ್ನು ಪ್ರಾರಂಭಿಸುತ್ತಿದ್ದರು. ಗ್ರೀನ್‌ವಿಲ್‌ನ ನಿವಾಸಿಗಳು ಇನ್ನೂ ನಿದ್ರೆಯಲ್ಲಿದ್ದಾಗ, ಈ ಕುಶಲ ಕಾರ್ಮಿಕರು ತಮ್ಮ ಹಾಡನ್ನು ಹಾಡುತ್ತಾ ಮತ್ತು ವ್ಯಾಯಾಮವನ್ನು ಮಾಡುತ್ತಾ ಬೀದಿಯಲ್ಲಿ ಮೆರವಣಿಗೆ ತೆಗೆದಂತೆ ಹೋಗುತ್ತಿದ್ದರು.

ಹಿಂದಿನ ಸಂಜೆ, ಮೈಟ್ಸ ಹುಡುಗಿಯರ ಕಾರನ್ನು ದುರಸ್ತಿ ಮಾಡಲು ಅವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಿದ್ದಾರೆ ಎಂಬುದು ಅವರಿಗೆ ತಿಳಿದಿತ್ತು. ಆದ್ದರಿಂದ, ಸೂರ್ಯೋದಯ ಆಗುವ ಪೂರ್ವದಲ್ಲಿಯೇ ತಮ್ಮ ಬಟ್ಟೆಗಳನ್ನು ತಮಗೆ ಕೊಡಬೇಕೆಂದು ಅವರು ಒತ್ತಾಯಿಸಲು ಪ್ರಾರಂಭಿಸಿದ್ದರು. ಯಾವುದೇ ಗಲಾಟೆಗೆ ಎಲ್ಲಕ್ಕಿಂತ ಹೆಚ್ಚು ಹೆದರುತ್ತಿದ್ದ ಹನಿಸಕಲ್, ಅವರನ್ನು ಸಾಧ್ಯವಾದಷ್ಟು ಬೇಗ ಹೊರಗೆ ಕಳುಹಿಸುವುದೇ ಒಳ್ಳೆಯದು ಎಂದು ನಿರ್ಧರಿಸಿ ಕಳಿಸಿಕೊಟ್ಟಳು.

ಈಗ ಅವರು ತಮ್ಮ ಹಾಡುಗಾರಿಕೆಯಿಂದ ಗ್ರೀನ್‌ವಿಲ್ ದಲ್ಲಿದ್ದವರನ್ನು ಎಬ್ಬಿಸುತ್ತಾ ಬೀದಿಯಲ್ಲಿ ಮೆರವಣಿಗೆ ತೆಗೆದಿದ್ದರು. ಏನು ನಡೆದಿದೆ ಎಂದು ಕುತೂಹಲದಿಂದ ನೋಡಲು ಕೆಲವು ಮೈಟ್ಸ ಹುಡುಗಿಯರು ಕಿಟಕಿಗಳತ್ತ ಧಾವಿಸಿದರು, ಇತರರು ಬಾಗಿಲುಗಳಿಂದ ಹೊರಬಂದರು.

"ನಿಮ್ಮ ಗ್ಯಾರೇಜ್ ಎಲ್ಲಿದೆ, ಹುಡುಗಿಯರೇ?" ಎಂದು ಬೆಂಡಮ್ ಕೂಗಿದ.

"ಇಲ್ಲಿದೆ, ನಾನು ನಿಮಗೆ ತೋರಿಸುತ್ತೇನೆ," ಎಂದು ಕೆಂಪು ಹುಡ್ ಮತ್ತು ತುಪ್ಪುಳಿನ ಬೆಳ್ಳಿಯ ಕ್ಯಾಟರ್‌ಪಿಲ್ಲರ್ ಕಾಲರ್ ಇರುವ ನೀಲಿ ಕೋಟು ಧರಿಸಿದ್ದ ಮೈಟ್ಸ್ ಹುಡುಗಿ ಹೇಳಿದಳು.

"ನಾವು ಬಲಕ್ಕೆ ತಿರುಗಬೇಕೋ ಇಲ್ಲವೆ ಎಡಕ್ಕೆ?" ಎಂದು ಬೆಂಡಮ್ ಕೇಳಿದನು.

"ಬಲಕ್ಕೆ," ಎಂದು ಅವರ ಚರ್ಮದ ಜಾಕೆಟ್‌ಗಳತ್ತ ಕದ್ದು ನೋಟ ಬೀರುತ್ತಾ ಅವರ ಮಾರ್ಗದರ್ಶಕಿ ಉತ್ತರಿಸಿದಳು.

"ಬಲಕ್ಕೆ ತಿರುಗಿ! ಕ್ವಿಕ್ ಮಾರ್ಚ್!" ಎಂದು ಬೆಂಡಮ್ ಆಜ್ಞಾಪಿಸಿದನು. "ಲೆಫ್ಟ್, ರಾಯಿಟ್! ಲೆಫ್ಟ್, ರಾಯಿಟ್!"



ಟ್ವಿಸ್ಟಮ್ ಅವನ ಹಿಮ್ಮಡಿಗಳಿಂದ ಹೆಜ್ಜೆ ಹಾಕುತ್ತಾ ಹೋಗುತ್ತಿದ್ದನು. ಅವರ ಮಾರ್ಗದರ್ಶಿಕೆ ಅವರೊಂದಿಗೆ ಹೆಜ್ಜೆ ಹಾಕಲು ಹೇಗೋ ಕಷ್ಟಪಟ್ಟು ಪ್ರಯತ್ನಿಸುತ್ತಿದ್ದಳು. ಬೆಂಡಮ್ ಮತ್ತು ಟ್ವಿಸ್ಟಮ್ ಎಷ್ಟು ವೇಗವಾಗಿ ಹೆಜ್ಜೆ ಹಾಕಿದರೆಂದರೆ, ಅವರು ನಿಲ್ಲಬೇಕಿದ್ದ ಬಾಗಿಲನ್ನು ನೇರವಾಗಿ ದಾಟಿ ಮುಂದೆ ಹೋದರು.

“ನಿಲ್ಲಿ, ನಿಲ್ಲಿ!” ಎಂದು ಅವರ ಮಾರ್ಗದರ್ಶಿಕೆ ಕೂಗಿದಳು. “ನೀವು ಮುಂದೆ ಹೋಗಿಬಿಟ್ಟಿದ್ದೀರಿ!”

“ಹಿಂದಕ್ಕೆ ತಿರುಗಿ!” ಎಂದು ಬೆಂಡಮ್ ಆಜ್ಞಾಪಿಸಿದನು. ಅವರು ಹಿಂದಕ್ಕೆ ಬಂದು, ಅವರ ಮಾರ್ಗದರ್ಶಿಕೆ ತೆರೆದಿಟ್ಟಿದ್ದ ಬಾಗಿಲಿನಿಂದ ಒಳಹೋದರು. ಅವರು ಒಂದು ಅಂಗಳದಲ್ಲಿ ಕಾಲಿಟ್ಟರು. ಅದರ ದೂರದ ತುದಿಯಲ್ಲಿ ಹಂಚು ಹೊದಿಸಿದ ಒಂದು ಶೆಡ್ ಇತ್ತು.

“ಇದನ್ನು ಗ್ಯಾರೇಜ್ ಎನ್ನುತ್ತೀರಾ? ಇದು ಬರೀ ಹಳೆಯ,ಮುರುಕು ಶೆಡ್,” ಎಂದು ಟ್ವಿಸ್ಟಮ್ ಹೇಳುತ್ತಾ, ಅವನು ಬಾಗಿಲುಗಳನ್ನು ತೆರೆದನು. ಒಳಗೆ ಒಂದು ಕಾರು ನಿಂತಿತ್ತು.





ಅಷ್ಟರಲ್ಲಿಯೇ ಇನ್ನೂ ಕೆಲವು ಮೈಟ್ಸ್ ಹುಡುಗಿಯರು ಹೊರ ಬಂದರು.
“ಈ ಶೆಡ್‌ನಲ್ಲಿ ಕತ್ತಲಿದೆ. ನಾವು ಕಾರನ್ನು ಹೊರಗೆ ತೆಗೆದುಕೊಂಡು ಹೋಗೋಣ,” ಬೆಂಡಮ್ ಎಂದನು.
“ಆದರೆ ಅದು ಓಡುವುದಿಲ್ಲ, ಅದು ಕೆಟ್ಟುಹೋಗಿದೆ,” ಹುಡುಗಿಯರೆಂದರು.
“ಪರವಾಗಿಲ್ಲ, ನಾವು ಅದನ್ನು ತಳ್ಳಿಕೊಂಡು ಹೊರಗೆ ತೆಗೆದುಕೊಂಡು ಹೋಗೋಣ. ನೀವು ಕೈ ಕೊಡಿ. ಒಂದು, ಎರಡು — ತಳ್ಳಿ! ಒಂದು, ಎರಡು — ತಳ್ಳಿ!”
ಚೀರಾಟ ಮತ್ತು ಕಿರಿಚಾಟದೊಂದಿಗೆ ಕಾರು ಹೊರಗೆ ಬಂತು.
ಒಂದು ನಿಮಿಷದಲ್ಲೇ ಬೆಂಡಮ್ ಮತ್ತು ಟ್ವಿಸ್ಟಮ್ ಅದರ ಕೆಳಗೆ ಹೋದರು, ಆಶ್ಚರ್ಯಚಕಿತರಾದ ಹುಡುಗಿಯರು ಅವರನ್ನು ಮೆಚ್ಚುಗೆಯಿಂದ ನೋಡುತೊಡಗಿದರು.
“ಓಹ್! ಟ್ಯಾಂಕ್ ಸೋರುತ್ತಲಿದೆ,” ಕಾರಿನ ಕೆಳಗಿನಿಂದ ಧ್ವನಿ ಕೇಳಿಸಿತು.
“ಟಕ್, ಟಕ್, ಟಕ್! ಒಂದು ಬೋಲ್ಟ್ ಸಡಿಲಾಗಿದೆ. ಸಿರಪ್ ಪೈಪ್ ಒಡೆದಿದೆ!”
ಸ್ವಲ್ಪ ಹೊತ್ತಿನಲ್ಲಿ ಅವರು ಮೈ ಸವರುತ್ತಾ ಹೊರಬಂದರು.



“ನಮಗೆ ಮಂಕಿ ರೆಂಚ್, ಪ್ಲಯರ್, ಸುತ್ತಿಗೆ, ಮತ್ತು
ಸೋಲ್ಡರಿಂಗ್ ಆಯರ್ನ್ ಕೊಡಿ,” ಎಂದು ಬೆಂಡಮ್ ಹೇಳಿದನು.
“ನಮ್ಮ ಬಳಿ ಇವುಗಳಲ್ಲಿ ಯಾವುದೂ ಇಲ್ಲ.”





“ಎಲ್ಲ ಮೈಟ್ಸ ಹುಡುಗರು ಕೈಟ್ ಟೌನ್‌ನಲ್ಲಿ ವಾಸಿಸುತ್ತಾರೆ.”
“ಅದು ಬಹಳ ದೂರದಲ್ಲಿದೆಯೇ?”
“ಸುಮಾರು ಒಂದು ಗಂಟೆಯ ನಡಿಗೆ.”
“ನಿಮಗೆ ಒಂದು ಗಂಟೆ ಬೇಕಾದರೆ, ನಮಗೆ ಅದಕ್ಕಿಂತ ಕಡಿಮೆ ಸಮಯ ಬೇಕಾಗುತ್ತದೆ. ಅಲ್ಲಿಗೆ ಹೇಗೆ ಹೋಗಬೇಕೆಂದು ನಮಗೆ ಹೇಳಿ.”
“ಈ ರಸ್ತೆಯ ಕೊನೆಯಲ್ಲಿ ಬಲಕ್ಕೆ ತಿರುಗಿ, ಹೊಲಗಳ ಮೂಲಕ ಹಾದುಹೋಗುವ ರಸ್ತೆಯನ್ನು ತಲುಪುವವರೆಗೆ ನೇರವಾಗಿ ಹೋಗುತ್ತಿರಿ, ಆ ರಸ್ತೆಯನ್ನು ಅನುಸರಿಸಿ, ಅದು ನಿಮ್ಮನ್ನು ಕೈಟ್ ಟೌನ್‌ಗೆ ಕರೆದೊಯ್ಯುತ್ತದೆ.”
“ಸಾಕಷ್ಟು ಸ್ಪಷ್ಟವಾಗಿದೆ, ಕ್ವಿಕ್ ಮಾರ್ಚ್! ಆದರೆ ತಡಿಯಿರಿ — ನಾವು ಹೊರಗೆ ಹೋದಾಗ, ಕೆಲವು ಹಳೆಯ ಚಿಂದಿ ಬಟ್ಟೆಗಳನ್ನು ಹುಡುಕಿ ಕಾರನ್ನು ಸ್ವಚ್ಛಗೊಳಿಸಿ. ಮೋಟಾರು ಕಾರುಗಳನ್ನು ಚೆನ್ನಾಗಿ ನೋಡಿಕೊಳ್ಳುವುದು ಇಷ್ಟ.” ಬೆಂಡಮ್ ಹೇಳಿದನು.
“ನಾವು ಹಾಗೆ ಮಾಡುತ್ತೇವೆ,” ಮೈಟ್ಸ ಹುಡುಗಿಯರು ಒಪ್ಪಿದರು.



“ಬಾಯ್. ಕ್ವಿಕ್ ಮಾರ್ಚ್!”
ಎಂದು ಹೇಳಿ ಅವರು ಹೊರಟುಹೋದರು. ಅವರು ಬೀದಿಯ ಕೊನೆಯವರೆಗೆ ತಲುಪಿದ ತಕ್ಷಣ ಬೆಂಡಮ್ ಹಾಡಲು ಆಜ್ಞಾಪಿಸಿದನು. ಅವರಿಬ್ಬರೂ ತಮ್ಮ ದೊಡ್ಡ ದನಿಯಲ್ಲಿ ಹಾಡಲು ಪ್ರಾರಂಭಿಸಿದರು:

ನನ್ನ ಸ್ನೇಹಿತ ಮತ್ತು ನಾನು ಹೊರಟೆವು,
ಹೊಳೆಯುವ ಆಕಾಶ ಕಂಡು ಹರ್ಷಪಟ್ಟೆವು,
ಕಣಿವೆಗಳ ಮೇಲೂ ಬೆಟ್ಟಗಳ ಮೇಲೂ,
ಹಳದಿ ಡ್ಯಾಫೊಡಿಲ್ ಹೂಗಳು ಹೊಳೆಯುತ್ತಿದ್ದವು.
ಅಲ್ಲಿ ನಾವು ಒಂದು ಕಪ್ಪೆಯನ್ನು ಕಂಡೆವು,
ರಸ್ತೆಯಲ್ಲಿ ನಮ್ಮ ಕಡೆಗೆ ಅದು ಜಿಗಿಯುತ್ತಾ ಬರುತ್ತಿತ್ತು,
ನಾವು ಸಾಧ್ಯವಾದಷ್ಟು ವೇಗವಾಗಿ ಮನೆಗೆ ಓಡಿದೆವು,
ನಾನು ಮೊದಲು ಓಡಿದೆ, ಅವನು ಕೊನೆಯಲ್ಲಿ ಓಡಿದನು.



ಆ ಹಾಡು ಮುಗಿಯಿತು, ಅವರು ಮತ್ತೊಂದು ಹಾಡಿದರು, ನಂತರ ಇನ್ನೊಂದು. ಶೀಘ್ರದಲ್ಲೇ ಅವರು ಪಟ್ಟಣದ ಹೊರಗೆ ಬಂದು ಹೊಲಗಳಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಅವರು ಸುಮಾರು ಒಂದು ಗಂಟೆ ದಾರಿ ನಡೆದು, ಕೈಟ್ ಟೌನ್ ಕಾಣುವಷ್ಟು ಹತ್ತಿರ ಬಂದಾಗ, ರಸ್ತೆಯ ಮಧ್ಯದಲ್ಲಿ ಒಂದು ಕಾರು ನಿಂತಿದ್ದನ್ನು ಕಂಡರು. ಅದರೊಳಗೆ ಯಾರೂ ಇರಲಿಲ್ಲ, ಆದರೆ ಎಣ್ಣೆ   ಕಲೆಗಳಿಂದ ಕೂಡಿದ ಕಪ್ಪು ಪ್ಯಾಂಟ್ ಧರಿಸಿದ್ದ ಒಂದು ಜೋಡಿ ಕಾಲುಗಳು ಅದರ ಕೆಳಗಿನಿಂದ ಹೊರಗೆ ಚಾಚಿಕೊಂಡಿರುವುದನ್ನು ಅವರು ನೋಡಿದರು.

"ಬಿಸಿಲು ಕಾಯಿಸಿಕೊಳ್ಳುತ್ತಿದ್ದೀಯಾ, ಶಾರ್ಟಿ?" ಎಂದು ಟ್ವಿಸ್ಟಮ್ ಕೂಗಿದನು.

ಗುಂಗುರು ಕಪ್ಪು ಕೂದಲಿನ ತಲೆಯೊಂದು ಗಾಲಿಗಳ ನಡುವಿನಿಂದ ಹೊರಗೆ ಬಂತು.

"ಓಹ್, ಹೌದು. ಕಾರಿನ ಕೆಳಗೆ ಬಿಸಿಲು ಕಾಯಿಸಿಕೊಳ್ಳುತ್ತಿದ್ದೇನೆ," ಎಂಬ ಉತ್ತರ ಬಂತು.

"ಏನು ತೊಂದರೆ?"

"ಸಿರಪ್ ಸಾಕಾಗುತ್ತಿಲ್ಲವೋ ಅಥವಾ ಸೋಡಾ ನೀರು ಜಾಸ್ತಿಯಾಗಿದೆಯೋ — ಯಾವುದೆಂದು ನನಗೆ ಅರ್ಥವಾಗುತ್ತಿಲ್ಲ, ಛೇ!"

ಅವನು ಕೆಳಗಿನಿಂದ ಹೊರಗೆ ಸವರಿಕೊಂಡು ಬಂದು ಒಂದು ಗಾಲಿಗೆ ಒದ್ದನು.

ಅವನ ಪ್ಯಾಂಟ್‌ಗಳಂತೆಯೇ ಅವನ ಜಾಕೆಟ್ ಕೂಡ ಕಪ್ಪಾದ ಎಣ್ಣೆ ಕಲೆಗಳಿಂದ ತುಂಬಿತ್ತು ಅದು ಪೇಟೆಂಟ್ ಲೆದರ್‌ನಂತೆ ಹೊಳೆಯುತ್ತಿತ್ತು. ಸೋಡಾ ನೀರಿನ ಕಾರುಗಳ ಒಡೆಯರ ವಿಷಯದಲ್ಲಿ ಸಾಮಾನ್ಯವಾಗಿ ಆಗುವಂತೆ, ಆ ಬಡವನು ತನ್ನ ಕಾರಿನೊಳಗಿರುವುದಕ್ಕಿಂತ ಅದರ ಕೆಳಗೇ ಹೆಚ್ಚು ಸಮಯ ಕಳೆಯುತ್ತಿದ್ದನೆಂಬುದು ಸ್ಪಷ್ಟವಾಯಿತು.

ಬೆಂಡಮ್ ಕಾರಿನ ಎಂಜಿನ್ನಿನ ಸುತ್ತಲೂ ಸುತ್ತುತ್ತಾ, ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದನು. ಮೇಲ್ಭಾಗದಲ್ಲಿ ಏನೂ ತಪ್ಪಿಲ್ಲವೆಂದು ಕಂಡುಕೊಂಡಾಗ, ಅವನು ಕೆಳಗೆ ಧುಮುಕಿದನು. ಅಲ್ಲಿ ಕೆಲವು ನಿಮಿಷಗಳ ಕಾಲ ತಡಕಾಡಿ, ನಂತರ ಹೊರಗೆ ತೆವಳಿಕೊಂಡು ಬಂದು ತಲೆಯನ್ನು ಕೆರೆದುಕೊಳ್ಳುತ್ತಾ ನಿಂತನು. ಅವನು ಹೊರಗೆ ಬಂದ ತಕ್ಷಣ, ಟ್ವಿಸ್ಟಮ್ ಕೆಳಗೆ ಧುಮುಕಿದನು, ಅವನು ಹೊರಗೆ ಬಂದಾದ ಮೇಲೆ ಕಾರಿನ ಒಡೆಯ ಕೆಳಗೆ ಧುಮುಕಿದನು. ಸ್ವಲ್ಪ ಸಮಯದವರೆಗೆ ಅವರು ಹೀಗೆ ಸರದಿ ಸರದಿಯಾಗಿ ಮಾಡುತ್ತಿದ್ದರು — ಕೆಳಗೆ ಧುಮುಕುವುದು, ಹೊರಗೆ ತೆವಳಿಕೊಂಡು ಬರುವುದು ಮತ್ತು ತಲೆ ಕೆರೆದುಕೊಳ್ಳುವುದು. ಕೊನೆಗೆ ಬೆಂಡಮ್ ತೊಂದರೆ ಏನೆಂದು ಕಂಡುಹಿಡಿದನು, ಮತ್ತು ಬಹಳ ಬೇಗ ಎಂಜಿನ್ ಸಂತೋಷದಿಂದ ಗುಣುಗುತ್ತಾ ಓಡತೊಡಗಿತು. ಸಂತೋಷಗೊಂಡ ಮಾಲೀಕ ಬೆಂಡಮ್ ಮತ್ತು ಟ್ವಿಸ್ಟಮ್ ಅವರ ಕೈಗಳನ್ನು ಕುಲುಕಿದನು.

"ಧನ್ಯವಾದಗಳು," ಎಂದು ಅವನು ಹೇಳಿದನು. "ನೀವು ಇಲ್ಲಿ ಬಂದುಬಿಟ್ಟಿರದಿದ್ದರೆ ನಾನು ಇಡೀ ದಿನ ಬಿಸಿಲು ಕಾಯಿಸಿಕೊಳ್ಳುತ್ತಲೇ ಕಳೆಯುತ್ತಿದ್ದೆ. ನೀವು ಎಲ್ಲಿಗೆ ಹೋಗುತ್ತಿದ್ದೀರಿ? ಒಳಗೆ ಹತ್ತಿ, ನಾನು ನಿಮ್ಮನ್ನು ಸ್ವಲ್ಪ ದೂರ ಕರೆದೊಯ್ಯುತ್ತೇನೆ."

ಬೆಂಡಮ್ ಮತ್ತು ಟ್ವಿಸ್ಟಮ್ ತಾವು ಏಕೆ ಬಂದಿದ್ದೇವೆಂದು ಅವನಿಗೆ ಹೇಳಿದರು.



“ನಾನು ನಿಮಗೆ ಒಂದು ಮಂಕಿ ರೆಂಚ್, ಒಂದು ಸುತ್ತಿಗೆ ಮತ್ತು ಒಂದು ಪ್ಲಾಯರ್ ಕೊಡಬಲ್ಲೆ, ಆದರೆ ನನ್ನ ಬಳಿ ಸೋಲ್ಡರಿಂಗ್ ಆಯರ್ನ ಇಲ್ಲ,” ಎಂದು ಕಾರಿನ ಒಡೆಯನು ಹೇಳಿದನು.

“ಕೈಟ್ ಟೌನ್‌ದಲ್ಲಿ ಒಂದನ್ನು ಹುಡುಕಲು ಸಾಧ್ಯವಿಲ್ಲವೆಂದು ನೀನು ಭಾವಿಸುತ್ತೀಯಾ?”

“ಖಂಡಿತವಾಗಿಯೂ ಹುಡುಕಬಹುದು. ನಮ್ಮ ಪ್ಲಂಬರ್, ಟ್ಯಾಪ್ಸ್, ಬಳಿ ಖಂಡಿತವಾಗಿಯೂ ಇರಬೇಕು. ನಾವು ಹೋಗಿ ಅವನನ್ನು ಕೇಳೋಣ.”

ಆ ಮೂವರೂ ಕಾರಿನೊಳಗೆ ಹತ್ತಿದರು, ಮತ್ತು ಕೆಲವು ನಿಮಿಷಗಳ ನಂತರ ಅವರು ಕೈಟ್ ಟೌನ್‌ದ ಮುಖ್ಯ ರಸ್ತೆಯಲ್ಲಿ ಕಾರು ಓಡಿಸುತ್ತಿದ್ದರು.





Printed in the Union of Soviet Socialist Republics
OCR vk.com/ak8englishbooks 2018





